| ಓ ಎಸ್ | 83/2017 | ಪಿ.ಡಬ್ಲ್ಯೂಃ 1 |
|---|---|---|

ಇಂದು ದಿಃ 15/1/2021 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕುಮಾರ್ ವಕೀಲರಿಂದಃ-

ನನ್ನ ತಂದೆಯ ಹೆಸರು ಮಸಣೇಗೌಡರು ಎಂದರೆನಿಜ. ನನ್ನ ತಾಯಿಯ ಹೆಸರು ಸಿದ್ದಮ್ಮ ಎಂದರೆ ನಿಜ. ನನ್ನ ತಂದೆಗೆ ಇಬ್ಬರು ಮಗಂದಿರು ಹಾಗು 7 ಮಂದಿ ಮಗಳಂದಿರು. ಅವರೆಂದರೆ ಚಿಕ್ಕಣ್ಣಮ್ಮ , ಪುಟ್ಟತಾಯಮ್ಮ , ದೊಣ್ಣೆಣ್ಣಮ್ಮ , ಕೆಂಪಮ್ಮ , ಚಿನ್ನೂರಮ್ಮ , ಮಾದೇಗೌಡ ಉಃ ಕುಂತೇಗೌಡ , ರಾಮೇಗೌಡ , ಸಾಕಮ್ಮ , ಚಿಕ್ಕಮಸಣಮ್ಮ ಎಂದರೆ ನಿಜ. 5 ನೇ ಪ್ರತಿವಾದಿ ಶಿವಮ್ಮ ನನ್ನ 2 ನೇ ಪತ್ನಿ ಎಂದರೆ ನಿಜ. ನನ್ನ ಮೊದಲನೇ ಪತ್ನಿಯ ಹಸೆರು ಹೂವಮ್ಮ. ನನ್ನ ಮೊದಲನೇ ಪತ್ನಿಗೆ ಮಕ್ಕಳಿಲ್ಲ ಎಂದರೆ ನಿಜ. ದಾವಾ ಸ್ವತ್ತುಗಳು ನನ್ನ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ 40 – 50 ವರ್ಷಗಳ ಹಿಂದೆಯೇ ಒಟ್ಟು ಕುಟುಂಬದಲ್ಲಿ ರಾಮೇಗೌಡ ಹಾಗು ಮಾದೇಗೌಡರಿಗೆ ವಿಭಾಗವಾಗಿ ಬೇರೆಬೇರೆ ಖಾತೆಯಾಗಿದೆ. ಆರೀತಿ ತೋರಿಸುವ ವಿಭಾಗಪತ್ರ ಇಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನನ್ನ ತಂದೆಯೇ ಖಾತೆ ಮಾಡಿಸಿಕೊಟ್ಟಿರುವ ದಾಖಲೆ ಇದೆ. ನನ್ನ ತಂದೆಗೆ ದಾವಾ ಆಸ್ತಿಗಳು ಗೇಣಿ ಹಕ್ಕಿನ ಮೂಲಕ ಭೂನ್ಯಾಯಾಮಂಡಳಿಯಿಂದ ಮಂಜೂರಾಗಿತ್ತು ಎಂದರೆ ನನ್ನ ತಾತ ದೊಂದೇಗೌಡ ಹಾಗು ನನ್ನ ತಂದೆ ಮಸಣೇಗೌಡ ಇಬ್ಬರಿಗೂ ಬಂದಿದೆ. ಆರೀತಿ ತೋರಿಸಲು ಹಕ್ಕುಪತ್ರ ಇದೆ ಅದನ್ನು ನಾನು ಹಾಜರುಪಡಿಸಿಲ್ಲ. ಭೂನ್ಯಾಯಮಂಡಳಿಯಿಂದ ನನ್ನ ತಾತನಹೆಸರಿಗೆ ಜಮೀನು ಬಂದಿತ್ತು ಎಂದು ತೋರಿಸುವ ದಾಖಲೆ ಇದ್ದರೆ ಹಾಜರುಪಡಿಸಲು ನನಗೆ ಆಕ್ಷೇಪ ಇಲ್ಲ ಎಂದರೆ ತಾಲ್ಲೂಕು ಆಫೀಸಿನಲ್ಲಿ ಪಡೆದುಕೊಂಡು ನೋಡಬೇಕು ಎಂದು ನುಡಿಯುತ್ತೇನೆ.

ದಾವಾ ಐಟಂ 2 ನನ್ನ ಪಿತ್ರಾರ್ಜಿ ಆಸ್ತಿ ಎಂದರೆ ಅದು ತಾತನಿಂದ ಬಂದಿತ್ತು ಎಂದು ನುಡಿಯುತ್ತೇನೆ. ದಾವಾ ಐಟಂ 3 ಒಟ್ಟು ಕುಟುಂ ಬದ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಅದು ಪ್ರತ್ಯೇಕ ಆಸ್ತಿಯಾಗಿರುತ್ತೆ. ಅದು ಶಿವಮ್ಮನ ಹೆಸರಿಗೆ ಕ್ರಯ ಆಗಿ

ಬಂದಿರುತ್ತೆ. ಒಟುಟ್ಟುಕುಟುಂಬದ ಮತ್ತು ಪಿತ್ರಾರ್ಜಿತ ಆಸ್ತಿಗಳ ಆದಾಯದಿಂದ ಆ ದಾವಾ ಐಟಂ 3 ನ್ನು ಖರೀದಿ ಮಾಡಿದ್ದು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಅದು ಶಿವಮ್ಮನ ಸ್ವಂತ ಆಸ್ತಿ ಹಾಗು ತಂದೆ ಮನೆಯಿಂದ ಆಕೆಗೆ ಕೊಡಿಸಿದ್ದಾರೆ. ನನ್ನ ಪಿತ್ನಿಯ ತವರೂರು ಚಜ್ಜಾಹುಂಡಿ, ಮೈಸೂರು ತಾಲ್ಲೂಕು. ನನ್ನ ಪತ್ನಿಯ ತವರುಮನೆಯವರು ಆರ್ಥಿಕವಾಗಿ ಸಬಲಾಗಿದ್ದಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸುತ್ತೇನೆಯೇ ಎಂದು ಕೇಳಿದರೆ ಯಾವರೀತಿ ದಾಖಲೆ ಬೇಕು ಎಂದು ಕೇಳುತ್ತೇನೆ. ಅವರಿಗೆ ವಾರ್ಷಕವಾಗಿ ಸಾಕಷ್ಟು ಆದಾಯ ಬರುತ್ತೆ ಎಂದು ತೋರಿಸುವ ರೀತಿ ದಾಖಲೆ ಹಾಜರುಪಡಿಸಬಹುದೇ ಎಂದು ಕೇಳಿದರೆ ಆರೀತಿ ಎಲ್ಲಾ ದಾಖಲೆ ಕೊಡಲು ಸಾಧ್ಯವಿಲ್ಲ ಎಂದು ನುಡಿಯುತ್ತೇನೆ. ಆಕೆಯ ತವರುಮನೆಯವರಿಗೆ 5-6 ಎಕರೆ ಜಮೀನು ಇದೆ. ಅದರ ದಾಖಲೆ ತೋರಿಸಲು ಸಾಧ್ಯವಿದೆಯೇ ಎಂದು ಕೇಳಿದರೆ ಅದೆಲ್ಲಾ ಸಾಧ್ಯವಿಲ್ಲ ಎಂದು ನುಡಿಯುತ್ತೇನೆ.

ಶಿವಮ್ಮರವರ ತವರುಮನೆಯವರೋಂದಿಗೆ ನಾನು ಉತ್ತಮ ಬಾಂದವ್ಯ ಹೋಂದಿದ್ದೇನೆ ಎಂದರೆ ನಿಜ. ಅವರ ಜಮೀನಿನ ದಾಖಲೆಯನ್ನು ಕೇಳಿ ತಂದುಕೊಡಬಹುದಲ್ಲವೇ ಎಂದರೆ ಆರೀತಿ ನಾನು ಅವರನ್ನು ಕೇಳಿಲ್ಲ ಎಂದು ನುಡಿಯುತ್ತೇನೆ.

ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್

ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.